ಒಳಗೆ ಯಜಮಾನರು ಮಕ್ಕಳು ಎಲ್ಲರೂ ಊಟಕ್ಕೆ ಕುಳಿತರು. ನಿಮಿಷಗಳು ಸರಿಯುತ್ತಿವೆ...

ಯಜಮಾನರು ಊಟ ಮಾಡಿ ಹೊರಗೆ ಬಂದು ಜಿಮ್ಮಿಯನ್ನು ಕರೆದರು. ಅವರ ಎಡಗೈಯಲ್ಲಿ ಲಾಂದ್ರ, ಬಲದ ಕೈಯಲ್ಲಿ ಅಲ್ಯುಮಿನಿಯಂ ಪಾತ್ರೆಯಲ್ಲಿ ಅನ್ನ ಕಾಣಿಸುತ್ತಿತ್ತು. ಬೆಳಕಿನಲ್ಲಿ ಜಿಮ್ಮಿ ಅನ್ನ ತಿನ್ನುತ್ತಿದ್ದ. ಮಾಂಸದ ಸಾರು ಬೆರೆಸಿದ ಅನ್ನವಾಗಿರಬಹುದು...

ಕತ್ತಲಲ್ಲಿ ಹಸಿದ ಹೊಟ್ಟೆಯೊಡನೆ, ಅಸೂಯೆ ಉಕ್ಕುವ ಕಣ್ಣುಗಳೊಡನೆ ರೋಸಿ ಅದನ್ನು ನೋಡುತ್ತ ನಿಂತಳು.

"ಜಿಮ್ಮಿ, ನಾನಿಲ್ಲಿದ್ದೇನೆ..." ಎಂದು ತಿಳಿಸಿದರೇನು ಎಂದೂ ತೋಚದೆ ಇರಲಿಲ್ಲ. ಆದರೆ, ಅವಳು ಅದನ್ನು ಮಾಡಲಿಲ್ಲ.

ಜಿಮ್ಮಿ ತನಗಿಂತಲೂ ಅಂತರದಲ್ಲಿ ಒಂದು ಉನ್ನತ ಸ್ಥಿತಿಯಲ್ಲಿ ಇದ್ದಾನೆ ಎಂದು ಅವಳಿಗೆ ಗೊತ್ತಿತ್ತು. ಅವನು ಧನಿಕನಾದ ಮನೆ ಯಜಮಾನರ ಸಾಕುಪ್ರಾಣಿ... ಅವನ ದೇಹಕ್ಕೆ ಸೌಂದರ್ಯ, ಸ್ವಚ್ಛತೆಗಳಿವೆ. ವಾರಕ್ಕೊಮ್ಮೆ ಅವನಿಗೆ ಸ್ನಾನ ಮಾಡಿಸುವುದಿದೆ. ಮಲಗುವುದಕ್ಕೆ ಒಂದು ಪುಟ್ಟ ಹಾಸಿಗೆಯನ್ನು ಸಿದ್ಧಪಡಿಸಲಾಗಿದೆ. ಸಂಜೆ ಹೊತ್ತಲ್ಲಿ ಯಜಮಾನರು ಸಂಕಲೆ ಹಿಡಿದುಕೊಂಡು ಜೊತೆಗೆ ಕರೆದೊಯ್ಯುವರು.

ರೋಸಿಯನ್ನು ಭಯಂಕರವಾಗಿ ಪೀಡಿಸುವ ಕುಟ್ಟನಿಗೂ ಜಿಮ್ಮಿಯೆಂದರೆ ಪ್ರೀತಿ. ಅವನ ತಂಗಿ ಪುಟ್ಟ ಮಗುವಿನಂತೆ ಜಿಮ್ಮಿಯನ್ನು ಹೆಗಲಲ್ಲಿ ಏರಿಸಿಕೊಂಡು ನಡೆದಾಡುವಳು.

ಜಿಮ್ಮಿ ಊಟ ಮುಗಿಸಿ ಯಜಮಾನರ ಜೊತೆಗೆ ಹೋದ. ಒಬ್ಬೊಬ್ಬರಾಗಿ ಹೊರಗೆ ಬಂದು ಕೈತೊಳೆದು ಹೋದರು. ಕೊನೆಗೆ ಎಂಜಲೆಲೆಗಳನ್ನು ಎತ್ತಿ ಹಿಡಿದುಕೊಂಡು ಅಡುಗೆಯವನು ಹೊರಗೆ ಬಂದ. ಅವಳು ಓಡಿ ಹೋದಳು.

"ಹೋ...ಹೊ... ಚೆಂಡು ಹೊಡೆದಂತೆ ಹೊಡೆದೇನು..." ಎನ್ನುತ್ತಿದ್ದ ಅವನ ಹಿಂದಿನಿಂದ ರೋಸಿ ಬಾಲವಲ್ಲಾಡಿಸಿ ಕುಯ್ಯುಂಗುಡುತ್ತ ನಡೆದಳು. ಆದರೆ, ನೋಡಬೇಕು. ಸಾಮಾನ್ಯವಾಗಿ ಎಂಜಲೆಲೆ ಎಸೆಯುವ ಸ್ಥಳದಲ್ಲಿ ಅವನು ಹಾಕಲಿಲ್ಲ. ಒಂದು ಚಿಕ್ಕ ಬಾವಿಯಷ್ಟು ಗಾತ್ರವಿರುವ ಹೊಂಡವೊಂದು ಮನೆಯ ಹಿಂಭಾಗದಲ್ಲಿದೆ. ಅದರ ತಳದಲ್ಲಿ ತುಂಬಾ ಪೊದೆಗಳಿವೆ. ನಾಣು ಮಹತ್ತಾದ ಸಾಧನೆಯನ್ನು ಮಾಡುತ್ತಿದ್ದಾನೆಂಬ ಸಂತೃಪ್ತಿಯಿಂದ ಎಂಜಲೆಲೆಗಳನ್ನು ಅದರಲ್ಲಿ ಎಸೆದ. ವಿಷಾದ, ನಿರಾಸೆ, ಸಿಟ್ಟು ಪ್ರಕಟಿಸುತ್ತ ನಿಂತ ರೋಸಿಯನ್ನು ನೋಡಿ ಆತ ಹೇಳಿದ:

"ಇನ್ನು ಅದಕ್ಕಾಗಿ ಎಳೆದಾಟ ಕಚ್ಚಾಟ ಮಾಡಲಾರವಲ್ಲ; ಕಳ್ಳ ಜಂತುಗಳು..."

ರೋಸಿ ಸೌದೆ ಕೊಟ್ಟಿಗೆಗೆ ಮೆಲ್ಲನೆ ಹೋದಳು.

ಮನೆಯಲ್ಲಿ ಎಲ್ಲರೂ ನಿದ್ರಿಸಿದರು. ಕತ್ತಲು ದಟ್ಟವಾಗಲಾರಂಭಿಸಿತು. ರೋಸಿಗೆ ಮಲಗಲು ನೆಮ್ಮದಿ ಇರಲಿಲ್ಲ. ಅವಳು ಅದೃಷ್ಟ ಪರೀಕ್ಷೆಗೆ ನಿಶ್ಚಯಿಸಿದಳು. ಮನೆಯ ಸುತ್ತಲೂ ಮೂಸುತ್ತಾ ನಡೆದು ನೋಡಿದಳು. ತಿನ್ನುವ ವಸ್ತುಗಳು ಏನಾದರೂ ಸಿಗಬಹುದೇ ಎಂದು. ಪೋರ್ಟಿಕೋಕ್ಕೆ ಹತ್ತುವ ಮೂಲೆಯಲ್ಲಿ ಯಜಮಾನರ ಹೊಸ ಶೂಗಳನ್ನು ಇರಿಸಲಾಗಿದೆ. ಅವಳು ಅವುಗಳಲ್ಲಿ ಒಂದನ್ನು ಕಚ್ಚಿ ತೆಗೆದಳು.

ಜಿಮ್ಮಿ ಪೋರ್ಟಿಕೋದಲ್ಲಿ ಮಲಗುವುದಾದರೂ ದಿನ್ನೆಯ ಮರೆಯಲ್ಲಿ. ಅವನಿಗೆ ರೋಸಿಯ ವಿಕ್ರಮ ಕಾಣುವುದು ಸಾಧ್ಯವಿರಲಿಲ್ಲ. ಬೂಟ್ ಪಾಲಿಶ್‌ನ ವಾಸನೆ ಅಸಹನೀಯವೆನಿಸಿದರೂ ಅವಳದನ್ನು ಸ್ವಲ್ಪದೂರಕ್ಕೆ ಕೊಂಡುಹೋಗಿ ನೆಲದಲ್ಲಿ ಹಾಕಿದಳು. ನೀಳವಾಗಿ ಕುಳಿತ ಮುಂಗೈಗಳ ನಡುವೆ ಶೂವನ್ನು ಹಿಡಿದು ಅವಳದನ್ನು ತುಂಬಾ ಹೊತ್ತು ಕಡಿದು ನೋಡಿದಳು. ತಿನ್ನಲು ಸಾಧ್ಯವಾಗದೇ ಇದ್ದರೂ ಸ್ವಾರಸ್ಯಕರವಾಗಿತ್ತು. ಅವಳ ಬಗ್ಗೆ ಯಾವುದೇ ರೀತಿಯ ಅನುಕಂಪ